ಆ) ಹೌದು. ವಸತಿನಿಲಯದ ಕಟ್ಟಡ ಕಟ್ಟಲು ನಿವೇಶನ ಲಭ್ಯವಿರುತ್ತದೆ.

ಇ) ವಿದ್ಯಾರ್ಥಿನಿಲಯದ ಕಟ್ಟಡದ ನಿರ್ಮಾಣಕ್ಕಾಗಿ ಯೋಜನೆಯಲ್ಲಿ ಲಭ್ಯವಾಗುವ ಹಣದಲ್ಲಿ ಮುಂದುವರಿದ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುವುದು. ಹೊಸ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣವನ್ನು ಹಂತ ಹಂತವಾಗಿ ಹಣದ ಲಭ್ಯತೆಗೆ ಅನುಗುಣವಾಗಿ ಕೈಗೆತ್ತಿಕೊಳ್ಳಲಾಗುವುದು.

ಹಾವೇರಿ ಜಿಲ್ಲೆಯ ನಗರ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವುದು.

284(491)

ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯ ನಗರ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸಲು ಸರ್ಕಾರವು ಯಾವ ಯೋಜನೆ ಕೈಗೊಂಡಿದೆ?

ಆ) ಈ ಯೋಜನೆಗೆ ತಗಲುವ ವೆಚ್ಚ ಎಷ್ಟು?

ಇ) ಈ ಯೋಜನೆಯು ಯಾವ ಹಂತದಲ್ಲಿದೆ.

ಈ) ರಾಣೆಬೆನ್ನೂರು ಹಾಗೂ ಬ್ಯಾಡಗಿ ನಗರಗಳಿಗೆ ಕುಡಿಯುವ ನೀರು ಒದಗಿಸುವ ಮುದೇನೂರು ಕುಡಿಯುವ ನೀರು ಯೋಜನೆಗೆ ಮಂಜೂರು ಆದ ವೆಚ್ಚ ಎಷ್ಟು?

ಉ) ಈ ಯೋಜನೆಯನ್ನು ಯಾವಾಗ ಪೂರ್ಣ ಗೊಳಿಸಲಾಗುವುದು.

ಊ) ಈ ಯೋಜನೆಯನ್ನು ಪೂರ್ಣಗೊಳಿಸಲು ತಗಲುವ ವೆಚ್ಚವೆಷ್ಟು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು):

ಅ) ಹಾವೇರಿ ಜಿಲ್ಲೆಗೆ ಒಳಪಡುವ ಕೆಳಕಂಡ ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಗಳನ್ನು ಸರ್ಕಾರವು ಕೈಗೊಂಡಿದೆ.

1. ಹಾವೇರಿ

2. ರಾಣೆಬೆನ್ನೂರು - ಬ್ಯಾಡಗಿ

3. ಶಿಗ್ಗಾಂವ್ - ಸವಣೂರು

ಆ) ಮೇಲ್ಕಂಡ ನೀರು ಸರಬರಾಜು ಯೋಜನೆಗಳಿಗೆ ತಗಲುವ ವೆಚ್ಚ ಈ ಕೆಳಕಂಡಂತೆ ಇರುತ್ತದೆ.

(ಲಕ್ಷಗಳಲ್ಲಿ)

ನಗರ	ಅನುಮೋದನೆಯ ಮೊತ್ತ	ಪರಿಷ್ಕೃತ ಮೊತ್ತ ತಗಲುವ ವೆಚ್ಚ
1. ಹಾವೇರಿ	ರೂ. 1522.78	1522.78
2. ರಾಣೆಬೆನ್ನೂರು ಬ್ಯಾಡಗಿ	ರೂ.450.00	2200.00
3. ಶಿಗ್ಗಾವಂ-ಸವಣೂರು	ರೂ.745.00	1491.50

ಇ) ಈ ಯೋಜನೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ) ಮೊತ್ತ ರೂ.450.00 ಲಕ್ಷಗಳು.

ಉ) ರಾಣೆಬೆನ್ನೂರು-ಬ್ಯಾಡಗಿ ಯೋಜನೆಯನ್ನು ಮೇ 2001ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಊ) ಸುಮಾರು ರೂ.22.00 ಕೋಟಿ ವೆಚ್ಚವಾಗಬಹುದು.

ಬೆಂಗಳೂರು ನಗರದಲ್ಲಿ ಸಣ್ಣ ಕೈಗಾರಿಕೆಗಳು ಮುಚ್ಚುತ್ತಿರುವುದು.

286(557)

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು(ಶಿವಾಜಿನಗರ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸಣ್ಣ ಕೈಗಾರಿಕೆಗಳೆಷ್ಟು?

ಆ) ಇವುಗಳ ಪೈಕಿ ಎಷ್ಟು ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗಿವೆ.

ಇ) ಸಣ್ಣ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡ